**ಓ.ಎಸ್. ನಂ. 44/2020** **ಡಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 4.10.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್.ವಿ ವಕೀಲರಿಂದಃ

ನನಗೆ ಯಾವುದೇ ದಾಖಲೆಯನ್ನು ತೋರಿಸಿದರೆ ನೋಡಿ ಹೇಳಬಹುದು. ವಾದಿಯು ಪ್ರತಿವಾದಿಯರ ವಿರುದ್ಧ ಹಕ್ಕು ಘೋಷಣೆ ಮತ್ತು ನಿರ್ಬಂಧಕಾಜ್ಞೆ ಕೋರಿ ದಾವೆ ಹೂಡಿರುತ್ತಾರೆ ಎಂದರೆ ಸರಿ. ದಿನಾಂಕ 7.8.2020 ರಂದು ಈ ದಾವೆಯಲ್ಲಿ ಏಕಪಕ್ಷೀಯ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವಾಗಿತ್ತು ಎಂದರೆ ಸರಿ. ಸದರಿ ಏಕಪಕ್ಷೀಯ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ದಿನಾಂಕ 23.12.2020 ರಂದು ಈ ನ್ಯಾಯಾಲಯವು ಖಾಯಂಗೊಳಿಸಿರುತ್ತದೆ ಎಂದರೆ ಸರಿ. ಸದರಿ ನಿರ್ಬಂಧಕಾಜ್ಞೆ ಆದೇಶವಾದ ನಂತರ ಪ್ರತಿವಾದಿಯರು ದಾವಆಸ್ತಿಗೆ ತೊಂದರೆ ನೀಡುತ್ತಿದ್ದಾರೆ ಎಂದು ರಕ್ಷಣೆ ಕೋರಿ ಸರಗೂರು ಪೋಲಿಸರಿಗೆ ನಿರ್ದೇಶನ ನೀಡುವಂತೆ ವಾದಿಯರು ಒಂದು ಮಧ್ಯಂತರ ಅರ್ಜಿ ಸಲ್ಲಿಸಿದ್ದು, ಅದು ಪುರಸ್ಕೃತಗೊಂಡಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯರು ದಾವಆಸ್ತಿಗೆ ತೊಂದರೆ ಮಾಡುತ್ತಿದ್ದಾರೆ ಎಂದು ಸರಗೂರು ಪೋಲಿಸ್ ಠಾಣೆಗೆ ದೂರು ನೀಡಿರುತ್ತಾರೆ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ನಾವು ದಾವಆಸ್ತಿಗೆ ತೊಂದರೆ ನೀಡಿರುವುದಿಲ್ಲ ಎನ್ನುವರು. ಈಗ ನೋಡುತ್ತಿರುವ ದಾಖಲೆಯು ವಾದಿಯು ಠಾಣೆಗೆ ನೀಡಿರುವ ದೂರು ಮತ್ತು ಸ್ವೀಕೃತಿಯಾಗಿರುತ್ತದೆ ಎಂದರೆ ಸರಿ. ಸಾಕ್ಷಿದಾರರು ಅದನ್ನು ನೋಡಿ ಒಪ್ಪಿದ್ದರಿಂದ ಅದನ್ನು ನಿಪಿ23 ಮತ್ತು ನಿಪಿ24 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ದಾಖಲೆಯ ಪ್ರಕಾರ ದಿನಾಂಕ 20.1.2022 ರಂದು ಪೋಲಿಸರು ಮುಂಜಾಗ್ರತ ಕ್ರಮದ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ನಾವು ಯಾವುದೇ ತಪ್ಪು ಮಾಡಿರುವುದಿಲ್ಲ ಎನ್ನುವರು. ಸಾಕ್ಷಿದಾರರು ಅದನ್ನು ನೋಡಿ ಒಪ್ಪಿದ್ದರಿಂದ ಅದನ್ನು ನಿಪಿ25 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ದಾಖಲೆಯ ಪ್ರಕಾರ ದಿನಾಂಕ 7.2.2022 ರಂದು ತಹಶೀಲ್ದಾರ್ ನ್ಯಾಯಾಲಯದಲ್ಲಿ ದಾಖಲಾಗಿದ್ದ ಎಂ.ಎ.ಜಿ ಸಿ.ಆರ್101/2021-22 ಪ್ರಕರಣದಲ್ಲಿ ವಕೀಲರ ಮೂಲಕ ಸಲ್ಲಿಸಿರುವ ವಕಾಲತ್ ಆಗಿರುತ್ತದೆ ಎಂದರೆ ಸರಿ. ಸಾಕ್ಷಿದಾರರು ಅದನ್ನು ನೋಡಿ ಒಪ್ಪಿದ್ದರಿಂದ ಅದನ್ನು ನಿಪಿ26 ಎಂದು ಗುರುತಿಸಲಾಯಿತು. ಸದರಿ ಪ್ರಕರಣದಲ್ಲಿ ಹಾಜರಾಗಲು ಈಗ ನೋಡುತ್ತಿರುವ ದಾಖಲೆಯಂತೆ ನಮಗೆ ಸಮನ್ಸ ನೀಡಲಾಗಿರುತ್ತದೆ ಎಂದರೆ ಸರಿ. ಸಾಕ್ಷಿದಾರರು ಅದನ್ನು ನೋಡಿ ಒಪ್ಪಿದ್ದರಿಂದ ಅದನ್ನು ನಿಪಿ27 ಎಂದು ಗುರುತಿಸಲಾಯಿತು. ತಹಶೀಲ್ದಾರ್ ನ್ಯಾಯಾಲಯದಲ್ಲಿ ಹಾಜರಾಗದಿದ್ದರಿಂದ ನನ್ನ ಹಾಗೂ ಉಳಿದ ಪ್ರತಿವಾದಿಯರ ವಿರುದ್ಧ ದಸ್ತಗಿರಿ ವಾರೆಂಟ್ ಜಾರಿಯಾಗಿತ್ತು ಎಂದರೆ ನಾನು ಹಾಜರಾಗಿರುತ್ತೇನೆ ಎನ್ನುವರು. ಸದರಿ ಪ್ರಕರಣದಲ್ಲಿ ನನ್ನ ವಕೀಲರು ಕಡತವನ್ನು ಮುಂಗಡವಾಗಿ ಕರೆಸಲು ಈಗ ನೋಡುತ್ತಿರುವ ದಾಖಲೆ ಪ್ರಕಾರ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿದಾರರು ಅದನ್ನು ನೋಡಿ ಒಪ್ಪಿದ್ದರಿಂದ ಅದನ್ನು ನಿಪಿ28 ಎಂದು ಗುರುತಿಸಲಾಯಿತು. ಸಾಕ್ಷಿದಾರರಿಗೆ ಸದರಿ ಪ್ರಕರಣದಲ್ಲಿ ಪ್ರತಿವಾದಿಯರು ಬರೆದುಕೊಟ್ಟಿರುವ ಮುಚ್ಚಳಿಕೆಯನ್ನು ತೋರಿಸಿದ್ದು ಆದರೆ ನ್ಯಾಯಾಲಯ

ನಿರ್ಬಂಧಕಾಜ್ಞೆಯನ್ನು ಉಲ್ಲಂಘಿಸಿರುವ ಬಗ್ಗೆ ಬೇರೊಂದು ಪ್ರಕರಣ ದಾಖಲಾಗಿರುವುದರಿಂದ ಮತ್ತು ಸದರಿ ದಾಖಲಾತಿಗಳು ಈ ಕೇಸಿಗೆ ಯಾವುದೇ ರೀತಿಯಿಂದ ಉಪಯೋಗವಿಲ್ಲದಿರುವುದರಿಂದ ಸದರಿ ದಾಖಲಾತಿಗಳನ್ನು ನಿಶಾನೆಯಾಗಿ ಗುರುತಿಸುವುದನ್ನು ತಿರಸ್ಕರಿಸಲಾಗಿದೆ. ನಿಡಿ7 ಪ್ರಮಾಣಪತ್ರವನ್ನು ನಾನು ನೋಟರಿಯವರಾದ ಜಿ.ನಾರಾಯಣಗೌಡ ರವರ ಸಮಕ್ಷಮ ಅಟೆಸ್ಟ್ ಮಾಡಿಸಿರುತ್ತೇನೆ.

ಗುರುಮಲ್ಲಮ್ಮ ಮತ್ತು ಚಿಕ್ಕಾಲಮ್ಮರವರಿಗೆ ಸರ್ವೆ ನಂ.28 ರಲ್ಲಿ ತಲಾ 1-32 ಎಕರೆ ಜಮೀನು ಪಿತ್ರಾರ್ಜಿತವಾಗಿ ಬಂದಿರುತ್ತದೆ ಎಂದು ಲಿಖಿತ ಹೇಳಿಕೆಯಲ್ಲಿ ಹೇಳಿದ್ದು ಹೇಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ ಎಂದರೆ ಸಾಕ್ಷಿದಾರರು ಸಣ್ಣಪ್ಪನಿಗೆ ಗುರುಮಲ್ಲಮ್ಮ ಎರಡನೇ ಹೆಂಡತಿಯಾಗಿದ್ದು, ನನ್ನ ತಾಯಿ ಸದರಿ ಗುರುಮಲ್ಲಮ್ಮರವರ ಅಕ್ಕನಾಗಿರುವುದರಿಂದ ನಾನೇ ಉಳುಮೆ ಮಾಡುತ್ತಿದ್ದೇನೆ ಎನ್ನುವರು. ಸಣ್ಣಪ್ಪನಿಗೆ ಎರಡನೇ ಹೆಂಡತಿ ಇರಲಿಲ್ಲ, ಗುರುಮಲ್ಲಮ್ಮ ಸಣ್ಣಪ್ಪನ ಎರಡನೇ ಹೆಂಡತಿಯಾಗಿರುವುಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗುರುಮಲ್ಲಮ್ಮ ಪುಟ್ಟತ್ತಪ್ಪನ ಹೆಂಡತಿಯಾಗಿದ್ದು ನಾನು ಸಣ್ಣಪ್ಪನ ಎರಡನೇ ಹೆಂಡತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಚಿಕ್ಕಾಲಮ್ಮ ಮತ್ತು ನನ್ನ ಚಿಕ್ಕಮ್ಮ ಗುರುಮಲ್ಲಮ್ಮ ರವರು ದಿನಾಂಕ 4.2.1975 ರಂದು ಆಸ್ತಿಗಳನ್ನು ಅದಲು ಬದಲು ಮಾಡಿಕೊಂಡಿರುತ್ತಾರೆ ಎಂದು ನ್ಯಾಯಾಲಯದಲ್ಲಿ ಸುಳ್ಳುಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ತಾಯಿ ಮತ್ತು ಗುರುಮಲ್ಲಮ್ಮನ ತಾಯಿ ದೇವಿರಮ್ಮನ ಹೆಸರಿನಲ್ಲಿ ಇಲ್ಲಿಯವರೆಗೆ ಮುಂದುವರೆಯುತ್ತಾ ಬಂದಿರುವ ಸರ್ವೆ ನಂ.28 ರ ಪಹಣಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ದಾವಆಸ್ತಿಯಲ್ಲಿ ಸ್ವಾಧೀನದಲ್ಲಿರುತ್ತೇನೆ ಎಂದು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಆಸ್ತಿಯಲ್ಲಿ ಸ್ವಾಧೀನದಲ್ಲಿರುವ ಬಗ್ಗೆ ನಿಡಿ1, ಗ್ರಾಮದಲ್ಲಿ ಬರೆದುಕೊಟ್ಟಿರುವ ಅದಲು ಬದಲು ಪತ್ರ ನಿಡಿ10 ನ್ನು ಹಾಜರುಪಡಿಸಿರುತ್ತೇನೆ. ನಾನು ಹುಣಸೂರಿನ ಎ.ಸಿ ನ್ಯಾಯಾಲಯದಲ್ಲಿ ಸಲ್ಲಿಸಿರುವ ಮೇಲ್ಮನವಿ ಏನಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಮೇಲ್ಮನವಿ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ನನಗೆ ದಾವಆಸ್ತಿಯಲ್ಲಿ ಯಾವುದೇ ಹಕ್ಕು ಸ್ವಾಧೀನ ಇರುವುದಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.